ಸುವರ್ಣ ಕರ್ನಾಟಕ-2006

ಕರ್ನಾಟಕ ಸರ್ಕಾರ

ಸಂಖ್ಯೆ:ಪಪೂಶಿಇ/ಮಾನ್ಯತೆ/ಮೈವಿ/ಎನ್‌ಎನ್-231/2006-07

ಆಯುಕ್ತರ ಕಛೇರಿ,
ಪದವಿ ಪೂರ್ವ ಶಿಕ್ಷಣ ಭವನ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಸಂಪಿಗೆ ರಸ್ತೆ,
ಮಲ್ಲೇಶ್ವರಂ, ಬೆಂಗಳೂರು-12.
ದಿನಾಂಕ: -11-2006.
12/12/2006

ಕಾಲೇಜಿನ ಸಂಕೇತ ಸಂಖ್ಯೆ:NN-231

## ಜ್ಞಾಪನ

ವಿಷಯ: ಶ್ರೀ ನಿರ್ವಾಣಸ್ವಾಮಿ ಕೃಪಾ ವಿದ್ಯಾಪೀಠ (ರಿ), ಕನಕಪುರ ಇವರಿಗೆ 2006-07ನೇ ಸಾಲಿನಿಂದ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಪ್ರಥಮ ಶೈಕ್ಷಣಿಕ ಅನುಮತಿ ನೀಡುವ ಕುರಿತು.

ಉಲ್ಲೇಖ: 1.ಸರ್ಕಾರದ ಆದೇಶಸಂಖ್ಯೆ:ಇಡಿ86ಎಸ್‌ಹೆಚ್‌ಹೆಚ್2006, ಬೆಂಗಳೂರು ದಿ:05-06-06.
2.ಉಪ ನಿರ್ದೇಶಕರು, ಪಪೂಹಾಗೂವೃಶಿಇಲಾಖೆ, ಮೈಸೂರು ಜಿಲ್ಲೆ ಇವರ ಪತ್ರಸಂಖ್ಯೆ: ಸಿ:2898:ಉನಿ:ಪಪೂಶಿಮೈ:ನಿರ್ವಾಣಸ್ವಾಮಿ:27:05-06:06-07/343ದಿ:22-07-06.

*********

ಶ್ರೀ ನಿರ್ವಾಣಸ್ವಾಮಿ ಕೃಪಾ ವಿದ್ಯಾಪೀಠ (ರಿ), ಕನಕಪುರ ಇವರಿಗೆ ಉಲ್ಲೇಖ (1)ರಲ್ಲಿ ಸರ್ಕಾರವು 2006-07 ನೇ ಸಾಲಿನಿಂದ ಸಂಯುಕ್ತ ಪದವಿ ಪೂರ್ವ ಕಾಲೇಜನ್ನು ಶಾಶ್ವತ ಅನುದಾನ ರಹಿತವಾಗಿ ಪ್ರಾರಂಭಿಸಲು ಮಂಜೂರಾತಿ ನೀಡಿರುತ್ತದೆ. ಸದರಿ ಆದೇಶದನ್ವಯ ಶಾಶ್ವತ ಅನುದಾನ ರಹಿತವಾಗಿ **ಎಸ್.ಎನ್.ಎಸ್. ಸಂಯುಕ್ತ ಪದವಿ ಪೂರ್ವ ಕಾಲೇಜು, ಆಲನಹಳ್ಳಿ, ಟಿ ನರಸೀಪುರ ರಸ್ತೆ, ಮೈಸೂರು** ಇಲ್ಲಿಗೆ 2006-07 ನೇ ಸಾಲಿನಿಂದ ಅನ್ವಯವಾಗುವಂತೆ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಲು ಕೆಳಕಂಡ ಭಾಷೆ/ವಿಷಯಗಳನ್ನು ಬೋಧಿಸಲು ಹಾಗೂ ನಿಬಂಧನೆಗಳನ್ನು ಒಳಗೊಂಡು ಪ್ರಥಮ ಶೈಕ್ಷಣಿಕ ಅನುಮತಿಯನ್ನು ನೀಡಲಾಗಿದೆ.

| ಭಾಗ-01 | ಭಾಗ-02 | ಸಂಯೋಜನೆಗಳು |
|---|---|---|
| ಕನ್ನಡ, ಇಂಗ್ಲೀಷ್, | ಇತಿಹಾಸ, ಅರ್ಥಶಾಸ್ತ್ರ ರಾಜ್ಯಶಾಸ್ತ್ರ ಸಮಾಜಶಾಸ್ತ್ರ | ಹೆಚ್.ಇ.ಪಿ.ಎಸ್(H.E.P.S.) |
| | | (ಒಂದು ಸಂಯೋಜನೆ ಮತ್ತು ಒಂದು ವಿಭಾಗ) |

ನಿಬಂಧನೆಗಳು:

01. ಶೈಕ್ಷಣಿಕ ಅನುಮತಿಯು ಶಾಶ್ವತ ಅನುದಾನ ರಹಿತ ಷರತ್ತಿಗೆ ಒಳಪಟ್ಟಿದೆ.
02. ಮೇಲೆ ತಿಳಿಸಿದ ಭಾಷೆ/ವಿಷಯಗಳು ಹಾಗೂ ಸಂಯೋಜನೆಗಳನ್ನು ಬೋಧಿಸಲು ಮಾತ್ರ ಅನುಮತಿ ನೀಡಿದೆ.
03. ಆಡಳಿತ ಮಂಡಳಿಯವರು ಅಗತ್ಯವಾದ ಪೀಠೋಪಕರಣ ಹಾಗೂ ಗ್ರಂಥಾಲಯದಲ್ಲಿ 5000 ಪುಸ್ತಕಗಳನ್ನು ಒದಗಿಸಬೇಕು.
04. ಅನುದಾನ ಸಂಹಿತೆಯ ನಿಯಮಗಳ ರೀತ್ಯ ಎಲ್ಲಾ ನಿಬಂಧನೆಗಳಿಗೂ ಬದ್ಧರಾಗಿರಬೇಕು.
05. ಅನುದಾನ ಸಂಹಿತೆಯ ನಿಯಮಗಳ ರೀತ್ಯ ಎಲ್ಲಾ ಅಗತ್ಯಗಳನ್ನು ಪೂರೈಸಬೇಕು.
06. ಪದವಿ ಪೂರ್ವ ಕಾಲೇಜಿಗೆ ಅವಶ್ಯಕವಿರುವಷ್ಟು ಸ್ವಂತ ಕಟ್ಟಡವನ್ನು ಹೊಂದಿರಬೇಕು.
07. ಆಡಳಿತ ಮಂಡಳಿಯ ಕಾರ್ಯದರ್ಶಿ/ಅಧ್ಯಕ್ಷರು ಮತ್ತು ನಿರ್ದೇಶಕರ ಜಂಟಿ ಖಾತೆಯಲ್ಲಿ ಭದ್ರತಾ ನಿಧಿಯನ್ನು ತೊಡಗಿಸಿ ರಶೀಧಿಯ ಪ್ರತಿಗಳನ್ನು ನಿರ್ದೇಶನಾಲಯಕ್ಕೆ ಕಳುಹಿಸಬೇಕು.

20/1/07

08. ಸದರಿ ಕಾಲೇಜಿನಲ್ಲಿ ಬೋಧಿಸಲು ಅವಕಾಶವಿರುವ ಯಾವುದಾದರೊಂದು ವಿಷಯದಲ್ಲಿ ಕನಿಷ್ಠ ಶೇಕಡಾವಾರು 55 ಅಂಕಗಳನ್ನು ಸ್ನಾತಕೋತ್ತರ ಪದವಿಯಲ್ಲಿ (ಎಂ.ಎ., ಎಂ.ಎಸ್‌ಸಿ, ಎಂ.ಕಾಂ. ರೀತಿಯ) ಪಡೆದವರು ಹಾಗೂ ಕಾಲೇಜಿನಲ್ಲಿ ಕನಿಷ್ಠ 5 ವರ್ಷಗಳ ಬೋಧನಾ ಅನುಭವವಿರುವ ಕಾಲೇಜಿನ ಮುಖ್ಯಸ್ಥರು/ಪ್ರಿನ್ಸಿಪಲ್ ಆಗಿರಬೇಕು.

09. ಸದರಿ ಕಾಲೇಜಿನಲ್ಲಿ ಬೋಧಿಸಲು ಅವಕಾಶವಿರುವ ಆಯಾಯ ವಿಷಯದಲ್ಲಿ ಕನಿಷ್ಠ ಶೇಕಡಾವಾರು 55 ಅಂಕಗಳನ್ನು ಸ್ನಾತಕೋತ್ತರ ಪದವಿಯಲ್ಲಿ ಪಡೆದವರನ್ನು ಆಯಾ ವಿಷಯವನ್ನು ಬೋಧಿಸಲು ಉಪನ್ಯಾಸಕರನ್ನಾಗಿ ನೇಮಿಸಬೇಕು.

10. ಪ್ರತಿಯೊಂದು ವಿಭಾಗದಲ್ಲೂ ಕನಿಷ್ಠ 40 ವಿದ್ಯಾರ್ಥಿಗಳಿರಬೇಕು ಹಾಗೂ 100 ವಿದ್ಯಾರ್ಥಿಗಳ ಗರಿಷ್ಠತೆಯನ್ನು ಮೀರಬಾರದು. ವಿಜ್ಞಾನ ವಿಭಾಗದಲ್ಲಾದರೆ 40 ಕಲಾ ಮತ್ತು ವಾಣಿಜ್ಯ ವಿಭಾಗದಲ್ಲಿ ಒಟ್ಟಾರೆ 40 ವಿದ್ಯಾರ್ಥಿಗಳ ಕನಿಷ್ಠ ಸಂಖ್ಯೆ ಇರಬೇಕು. ಅದರಂತೆ ಪ್ರತಿ ಭಾಷಾ ವಿಷಯದಲ್ಲೂ ಕನಿಷ್ಠ 10, ಐಚ್ಛಿಕ ವಿಷಯವಾದರೆ ಕನಿಷ್ಠ 15 ವಿದ್ಯಾರ್ಥಿಗಳು ಇರಲೇಬೇಕು.

11. ಪ್ರಯೋಗಾಲಯವು (ವಿಜ್ಞಾನ ವಿಷಯಕ್ಕೆ ಮಾತ್ರ) ನಿರ್ದೇಶನಾಲಯವು ಅನುಮೋದಿಸಿದ ಪಠ್ಯಕ್ರಮ ಪಟ್ಟಿಯ ಪ್ರಕಾರ ಉಪಕರಣಗಳನ್ನು ಹೊಂದಿರಬೇಕು.

12. ಯಾವುದೇ ವಿಷಯ ಹೊಸದಾಗಿ ಬೋಧನೆಯನ್ನು ನಿರ್ದೇಶನಾಲಯದ ಒಪ್ಪಿಗೆ/ಅನುಮೋದನೆ ಇಲ್ಲದೆ ಪ್ರಾರಂಭಿಸಕೂಡದು.

13. ಕಾಲಕಾಲಕ್ಕೆ ಸರ್ಕಾರದಿಂದ ಅನುಮೋದಿಸಲ್ಪಟ್ಟ ದರದಂತೆ ಫೀ/ಶುಲ್ಕ ಮತ್ತಿತರೆ ಹಣವನ್ನು ವಿದ್ಯಾರ್ಥಿಗಳಿಂದ ವಸೂಲು ಮಾಡಬೇಕು.

14. ಏನೇ ಬದಲಾವಣೆ ಮಾಡುವುದಾದರೆ ನಿರ್ದೇಶನಾಲಯದ ಪೂರ್ವಾನುಮತಿ ಪಡೆಯಬೇಕು.

15. ಪ್ರತಿ ವರ್ಷ ಮಾನ್ಯತೆ ನವೀಕರಣವನ್ನು ಕಡ್ಡಾಯವಾಗಿ ಪಡೆದುಕೊಳ್ಳತಕ್ಕದ್ದು.

16. ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆಗೆ ಅವಕಾಶವಿರುವುದಿಲ್ಲ.

17. ಜಾರಿಯಲ್ಲಿರುವ ಸರ್ಕಾರದ ಎಲ್ಲಾ ಆದೇಶಗಳನ್ನು ಹಾಗೂ ನಿಯಮಗಳನ್ನು ಪಾಲಿಸತಕ್ಕದ್ದು.

18. ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ (ಶಿಸ್ತು ಮತ್ತು ನಿಯಂತ್ರಣ) ನಿಯಮಗಳು 1978 ರ ನಿಯಮಗಳನ್ನು ತಪ್ಪದೆ ಪಾಲಿಸತಕ್ಕದ್ದು.

19. 2005-06 ನೇ ಸಾಲಿನ ಪ್ರಥಮ ಹಾಗೂ ದ್ವಿತೀಯ ಪಿಯುಸಿಯ ದಾಖಲಾತಿ ಮತ್ತು ಇತರೆ ಚಟುವಟಿಕೆಗಳ ಕೈಪಿಡಿ- ಈ ಕೈಪಿಡಿಯಲ್ಲಿ ಸೂಚಿಸಿರುವ ಎಲ್ಲಾ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು.

20. Govt letter No.ED29UDC 1971 Date:28-04-1971 ರ (Norms for Junior College) ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

(ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

ಜಂಟಿ ನಿರ್ದೇಶಕರು(ಆಡಳಿತ),
ಪದವಿ ಪೂರ್ವ ಶಿಕ್ಷಣ ಇಲಾಖೆ.

**ಪ್ರತಿಗಳು:**

1. ಉಪ ನಿರ್ದೇಶಕರು, ಪದವಿ ಪೂರ್ವ ಹಾಗೂ ವೃತ್ತಿ ಶಿಕ್ಷಣ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು.
2. ಅಧ್ಯಕ್ಷರು, ನಿರ್ವಾಣಸ್ವಾಮಿ ಕೃಪಾ ವಿದ್ಯಾಪೀಠ (ರಿ), ಶ್ರೀ ದೇಗುಲ ಮಠ, ಕನಕಪುರ-562 117. ಬೆಂಗಳೂರು ಜಿಲ್ಲೆ
3. ಪ್ರಾಚಾರ್ಯರು, ಎಸ್.ಎನ್.ಎಸ್. ಸಂಯುಕ್ತ ಪದವಿ ಪೂರ್ವ ಕಾಲೇಜು, ಆಲನಹಳ್ಳಿ, ಟಿ ನರಸೀಪುರ ರಸ್ತೆ, ಮೈಸೂರು.
4. ಗಣಕ ಶಾಖೆಗೆ, ಕೇಂದ್ರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
5. ಕಛೇರಿ ಪ್ರತಿ.

**ಕರ್ನಾಟಕ ಸರ್ಕಾರ**

ಸಂಖ್ಯೆ: ಪಪೂಶಿಇ/ಮಾನ್ಯತೆ/ಮೈವಿ/ಎನ್ಎನ್-231/2007-08

ಆಯುಕ್ತರ ಕಛೇರಿ,
ಪದವಿ ಪೂರ್ವ ಶಿಕ್ಷಣ ಭವನ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಸಂಪಿಗೆ ರೋಡ್,
ಮಲ್ಲೇಶ್ವರಂ, ಬೆಂಗಳೂರು-12.
ದಿನಾಂಕ: ೨೬-05-2007.

**ಜ್ಞಾಪನ**

ವಿಷಯ: ಶ್ರೀ ನಿರ್ವಾಣಸ್ವಾಮಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಆಲನಹಳ್ಳಿ, ಮೈಸೂರು ಇಲ್ಲಿಗೆ 2007-08 ನೇ ಸಾಲಿನಿಂದ ವಾಣಿಜ್ಯ ಮತ್ತು ವಿಜ್ಞಾನ ವಿಭಾಗಗಳನ್ನು ಮಂಜೂರು ಮಾಡುವ ಬಗ್ಗೆ.

ಉಲ್ಲೇಖ: ಉಪನಿರ್ದೇಶಕರು, ಪಪೂಹಾವ್ಯಶಿಇ, ಮೈಸೂರು ಜಿಲ್ಲೆ, ಮೈಸೂರು ಇವರ ಪತ್ರಸಂಖ್ಯೆ:ಸಿ:2898:ಉನಿ:ಪಪೂಶಿಇಮೈ:ಶ್ರೀನಿರ್ವಾಣಸ್ವಾಮಿ:27/06-07/829 ದಿನಾಂಕ:09-03-2007.

* * * *

ಪ್ರಸ್ತಾವನೆ:-

ಶ್ರೀ ನಿರ್ವಾಣಸ್ವಾಮಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಆಲನಹಳ್ಳಿ(ನಂದಿನಿ ಬಡಾವಣೆ), ಟಿ ನರಸೀಪುರ ರಸ್ತೆ, ಮೈಸೂರು-10 ಈ ಕಾಲೇಜಿಗೆ ವಿಜ್ಞಾನ ವಿಭಾಗವನ್ನು ಪಿ.ಸಿ.ಎಂ.ಸಿ. ಸಂಯೋಜನೆಯೊಂದಿಗೆ ಹಾಗೂ ವಾಣಿಜ್ಯ ವಿಭಾಗವನ್ನು ಇ.ಬಿ.ಎ.ಸಿಎಸ್. ಸಂಯೋಜನೆಯೊಂದಿಗೆ 2007-08ನೇ ಸಾಲಿನಿಂದ ಪ್ರಾರಂಭಿಸಲು ಅನುಮತಿ ನೀಡುವಂತೆ ವಿನಂತಿಸಿ ಉಲ್ಲೇಖಿತ ಪತ್ರದೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಹೊಸ ವಿಷಯ/ಸಂಯೋಜನೆ ಪ್ರಾರಂಭಿಸಲು ಅನುಮತಿ ನೀಡುವ ಕುರಿತಂತೆ ಕೆಳಕಂಡಂತೆ ಆದೇಶಿಸಿದೆ.

ಆದೇಶ:-

ಶ್ರೀ ನಿರ್ವಾಣಸ್ವಾಮಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಆಲನಹಳ್ಳಿ(ನಂದಿನಿ ಬಡಾವಣೆ), ಟಿ ನರಸೀಪುರ ರಸ್ತೆ, ಮೈಸೂರು-10 ಈ ಕಾಲೇಜಿಗೆ ವಿಜ್ಞಾನ ವಿಭಾಗವನ್ನು ಪಿ.ಸಿ.ಎಂ.ಸಿ. (ಭೌತಶಾಸ್ತ್ರ ರಸಾಯನಶಾಸ್ತ್ರ ಗಣಿತ ಮತ್ತು ಗಣಕವಿಜ್ಞಾನ) ಸಂಯೋಜನೆಯೊಂದಿಗೆ ಹಾಗೂ ವಾಣಿಜ್ಯ ವಿಭಾಗವನ್ನು ಇ.ಬಿ.ಎ.ಸಿಎಸ್. (ಅರ್ಥಶಾಸ್ತ್ರ ವ್ಯವಹಾರ ಅಧ್ಯಯನ, ಲೆಕ್ಕಶಾಸ್ತ್ರ ಮತ್ತು ಗಣಕವಿಜ್ಞಾನ) ಸಂಯೋಜನೆಯೊಂದಿಗೆ 2007-08ನೇ ಸಾಲಿನಿಂದ **ಶಾಶ್ವತ ಅನುದಾನರಹಿತವಾಗಿ** ಪ್ರಾರಂಭಿಸಲು ಕೆಳಕಂಡ ಷರತ್ತುಗಳನ್ನು ಪಾಲಿಸುವ ಷರತ್ತಿಗೊಳಪಟ್ಟು ಅನುಮತಿ ನೀಡಲಾಗಿದೆ.

ಷರತ್ತುಗಳು:-

1. ಈ ಹೆಚ್ಚುವರಿ ವಿಷಯ/ಸಂಯೋಜನೆ ಮಂಜೂರಾತಿಯು ಶಾಶ್ವತ ಅನುದಾನ ರಹಿತವಾಗಿದ್ದು, ಆಡಳಿತ ಮಂಡಳಿಯು ಮುಂದೆ ಯಾವುದೇ ಸಂದರ್ಭದಲ್ಲಿ ಅನುದಾನ ಕೇಳುವುದಿಲ್ಲವೆಂದು ಪದವಿ ಪೂರ್ವ ಶಿಕ್ಷಣ ನಿರ್ದೇಶಕರಿಗೆ ಮುಚ್ಚಳಿಕೆ ಬರೆದುಕೊಡತಕ್ಕದ್ದು.
2. ಮಂಜೂರಾದ ಹೆಚ್ಚುವರಿ ವಿಷಯ/ಸಂಯೋಜನೆಗೆ ನೇಮಕ ಮಾಡುವ ಉಪನ್ಯಾಸಕರಿಗೆ/ಸಿಬ್ಬಂದಿಗೆ ಸರ್ಕಾರದಿಂದ ಯಾವುದೇ ಅನುದಾನ ಲಭ್ಯವಾಗುವುದಿಲ್ಲ.
3. ಅರ್ಹ ವಿದ್ಯಾರ್ಹತೆಯುಳ್ಳ ಉಪನ್ಯಾಸಕರುಗಳನ್ನು ಶಾಶ್ವತ ಅನುದಾನ ರಹಿತವಾಗಿ ಆಡಳಿತ ಮಂಡಳಿಯ ಜವಾಬ್ದಾರಿಯ ಮೇಲೆ ಮಾತ್ರ ನೇಮಿಸಿಕೊಳ್ಳಬೇಕು.
4. ಸರ್ಕಾರವು ನಿಗಧಿಪಡಿಸಿದ ಶುಲ್ಕಗಳಿಗಿಂತ ಹೆಚ್ಚಿನ ಶುಲ್ಕ ಮತ್ತು ವಂತಿಕೆಗಳನ್ನು ವಸೂಲಿ ಮಾಡತಕ್ಕದ್ದಲ್ಲ.
5. ಹೊಸದಾಗಿ ತೆರೆಯಲು ಅನುಮತಿ ನೀಡುವ ಯಾವುದೇ ವಿಷಯ/ವಿಭಾಗ/ಸಂಯೋಜನೆಗಳು ಶಾಶ್ವತವಾಗಿ ಅನುದಾನ ರಹಿತವಾಗಿರುತ್ತವೆ. *(Permanently Unaided)*

..2.

6. ಸಂಬಂಧಪಟ್ಟ ಆಡಳಿತ ಮಂಡಳಿಗಳು ಶಿಕ್ಷಣ ಅಧಿನಿಯಮ ೧೯೮೩ ಹಾಗೂ ನಿಯಮಗಳ ಉಪಬಂಧಗಳ ಎಲ್ಲಾ ಷರತ್ತುಗಳನ್ನು ಮತ್ತು ನಿಬಂಧನೆಗಳನ್ನು ಪಾಲಿಸತಕ್ಕದ್ದು.

7. ಈ ಹೆಚ್ಚುವರಿ ವಿಷಯ/ಸಂಯೋಜನೆಗೆ ಅಗತ್ಯ ಸೌಲಭ್ಯಗಳನ್ನು ಹಾಗೂ ಕನಿಷ್ಠ ವಿದ್ಯಾರ್ಥಿಗಳ ಸಂಖ್ಯಾಬಲವನ್ನು ಹೊಂದಿರತಕ್ಕದ್ದು.

8. ಹೆಚ್ಚುವರಿ ವಿಷಯ/ಸಂಯೋಜನೆ ಮಂಜೂರಾತಿಯಿಂದ ಯಾವುದೇ ರೀತಿಯ ಅನಾರೋಗ್ಯಕರ ಸ್ಪರ್ಧೆ ಉಂಟಾಗಬಾರದು ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಸುತ್ತಮುತ್ತಲಿನ ಕಾಲೇಜುಗಳ ಬೆಳವಣಿಗೆ ಹಾಗೂ ಅಭಿವೃದ್ಧಿಗೆ ದಕ್ಕೆ ಉಂಟಾಗಬಾರದು ಮತ್ತು ಈ ಬಗ್ಗೆ ಹೆಚ್ಚುವರಿ ವಿಭಾಗಗಳ ಸಂಬಂಧದಲ್ಲಿ ನೆರೆಹೊರೆಯ ಕಾಲೇಜುಗಳಿಂದ ಅಥವಾ ಪೋಷಕರಿಂದ ಆಕ್ಷೇಪಣೆಗಳು ಬಂದಲ್ಲಿ ಅವುಗಳನ್ನು ಗಂಭೀರವಾಗಿ ಪರಿಗಣಿಸಲಾಗುವುದು.

9. ಗಣಕವಿಜ್ಞಾನ ವಿಭಾಗಕ್ಕೆ ಸಂಬಂಧಿಸಿದಂತೆ ಕನಿಷ್ಠ ೧೦ ವಿದ್ಯಾರ್ಥಿಗಳಿಗೆ ಒಂದರಂತೆ (10:1) ಗಣಕಯಂತ್ರಗಳಿರಬೇಕು. ೪೦ ವಿದ್ಯಾರ್ಥಿಗಳಿಗೆ ೪ ಗಣಕಯಂತ್ರ ಕೊಠಡಿಗಳ ಹಾಗೂ ಇತರ ಸೌಲಭ್ಯಗಳಿರಬೇಕು.

10. ಪ್ರಯೋಗಾಲಯವು (ವಿಜ್ಞಾನ ವಿಷಯಕ್ಕೆ ಮಾತ್ರ) ನಿರ್ದೇಶನಾಲಯವು ಅನುಮೋದಿಸಿದ ಪಠ್ಯಕ್ರಮ ಪಟ್ಟಿಯ ಪ್ರಕಾರ ಉಪಕರಣಗಳನ್ನು ಹೊಂದಿರಬೇಕು.

11. ಕಾಲೇಜಿನಲ್ಲಿ ಈಗಾಗಲೇ ಅಳವಡಿಸಿಕೊಂಡಿರುವ ವಿಭಾಗಗಳಲ್ಲಿ ಕನಿಷ್ಠ ೪೦ ವಿದ್ಯಾರ್ಥಿ ಸಂಖ್ಯಾಬಲವನ್ನು ಕಾಯ್ದಿರಿಸಿಕೊಂಡಿರಬೇಕು.

12. ಪ್ರತಿ ವಿಭಾಗಕ್ಕೆ ೧೦೦ ಕ್ಕಿಂತಲೂ ಹೆಚ್ಚಿನ ವಿದ್ಯಾರ್ಥಿಗಳನ್ನು ದಾಖಲು ಮಾಡಬಾರದು ಮತ್ತು ಇತ್ತೀಚಿನ ದಾಖಲಾತಿ ನಿಯಮವನ್ನು ತಪ್ಪದೇ ಪಾಲಿಸಲು ಸೂಚಿಸಿದೆ.

13. ಹೆಚ್ಚುವರಿ ವಿಷಯ/ಸಂಯೋಜನೆ ತೆರೆಯಲು ಉದ್ದೇಶಿಸಿರುವ ಕಾಲೇಜಿನ ೮ ಕಿ.ಮೀ. ವ್ಯಾಪ್ತಿಯಲ್ಲಿರುವ ಕಾಲೇಜುಗಳಲ್ಲಿ ಸದರಿ ಸಂಯೋಜನೆ ಇದ್ದಲ್ಲಿ ವಿಷಯ /ವಿಭಾಗಗಳಲ್ಲಿ ವಿದ್ಯಾರ್ಥಿ ಸಂಖ್ಯೆ ಗರಿಷ್ಠ ಹಂತ ತಲುಪಿರಬೇಕು.

14. ಹೆಚ್ಚುವರಿ ವಿಭಾಗ ತೆರೆಯಬೇಕಾದರೆ ವಿಭಾಗಕ್ಕೊಂದರಂತೆ ಕನಿಷ್ಠ ೨೨ x ೩೦ ಅಳತೆಯ ಹೆಚ್ಚುವರಿ ಕೊಠಡಿ ಇರಬೇಕು.

15. ಹೊಸದಾಗಿ ತೆರೆಯಲು ಅನುಮತಿ ನೀಡಿದ ವಿಷಯ/ಸಂಯೋಜನೆಗೆ ಅನುಮತಿ ನೀಡಿದ ದಿನಾಂಕದಿಂದ ಮೂರು ಶೈಕ್ಷಣಿಕ ವರ್ಷಗಳಲ್ಲಿ ಕನಿಷ್ಠ ವಿದ್ಯಾರ್ಥಿಗಳ ಸಂಖ್ಯಾಬಲವು ೪೦ನ್ನು ತಲುಪಬೇಕು, ಆ ರೀತಿ ಕನಿಷ್ಠ ಸಂಖ್ಯಾಬಲ ಹೊಂದದಿದ್ದಲ್ಲಿ ನೀಡಲಾದ ಅನುಮತಿಯನ್ನು ರದ್ದುಪಡಿಸಲಾಗುವುದು.

# ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ,

ಜಂಟಿನಿರ್ದೇಶಕರು(ಶೈಕ್ಷಣಿಕ),
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು :-

1. ಉಪನಿರ್ದೇಶಕರು, ಪಪೂಶಿಇ, ಮೈಸೂರು ಜಿಲ್ಲೆ, ನಾರಾಯಣಶಾಸ್ತ್ರಿ ರಸ್ತೆ, ಮೈಸೂರು - ಮುಂದಿನ ಕ್ರಮಕ್ಕಾಗಿ.
2. ಪ್ರಾಚಾರ್ಯರು, ಶ್ರೀ ನಿರ್ವಾಣಸ್ವಾಮಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಆಲನಹಳ್ಳಿ(ನಂದಿನಿ ಬಡಾವಣೆ), ಟಿ ನರಸೀಪುರ ರಸ್ತೆ, ಮೈಸೂರು-10.
3. ಗಣಕಶಾಖೆ, ಕೇಂದ್ರ ಕಚೇರಿ, ಪಪೂಶಿಇ, ಬೆಂಗಳೂರು - ಮುಂದಿನ ಕ್ರಮಕ್ಕಾಗಿ.
4. ಕಚೇರಿ/ಹೆಚ್ಚುವರಿ ಪ್ರತಿ.